(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಆರ್‌ಎಸ್‌ಎಸ್ ಬಗ್ಗೆ ಒಳ್ಳೆಯ ಮಾತುಗಳನ್ನು ಕೇಳಲು ಇವರಿಗೆ ವ್ಯವಧಾನವಿಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ನೀವು ಒಳ್ಳೆಯದನ್ನು ಕೇಳುವುದಿಲ್ಲ, ಒಳ್ಳೆಯದನ್ನು ಆಡುವುದಿಲ್ಲ, ಒಳ್ಳೆಯದನ್ನು ನೋಡುವುದಿಲ್ಲ. ಈ ರೀತಿಯವರು ಕಾಂಗ್ರೆಸ್‌ನವರು.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಪಕ್ಷದ ನಾಯಕರು, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಆರ್‌ಎಸ್‌ಎಸ್ ಬಗ್ಗೆ ವಿಧಾನ ಸಭೆಯನ್ನು ಪ್ರಚಾರ ವೇದಿಕೆಯನ್ನಾಗಿ ಮಾಡಿಕೊಂಡರೆ, ಇದನ್ನು ಯಾರೂ ತಡೆಯಲಿಕ್ಕೆ ಸಾಧ್ಯವಿಲ್ಲ. ಇದು ರಾಜಕೀಯ ಪಕ್ಷಗಳ ಪ್ರಚಾರ ಸಭೆ ಅಲ್ಲ. ಅವರು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲಿ. ಬಜರಂಗದಳ, ವಿಹೆಚ್‌ಪಿ, ಆರ್‌ಎಸ್‌ಎಸ್ ಪ್ರಚಾರ ವೇದಿಕೆಯನ್ನಾಗಿ ಈ ವಿಧಾನ ಸಭೆಯನ್ನು ಮಾಡಿಕೊಳ್ಳಲು ದಯವಿಟ್ಟು ತಾವು ಅವಕಾಶ ಕೊಡಬಾರದು.

ಶ್ರೀ ಎನ್. ಸಂಪಂಗಿ : ರೈತರ ಬಗ್ಗೆ ಮಾತನಾಡಲಿ, ಬರದ ವಿಚಾರ ಮಾತನಾಡಲಿ. ಅದಕ್ಕೆ ಅವಕಾಶವಿಲ್ಲ. ನಾನು ನಿನ್ನೆ ಒಂದು ಗಂಟೆಯಿಂದ ಕೇಳಿದ್ದೇನೆ. ಅಲ್ಲಿ ಬೆಂಕಿ ಬೀಳುತ್ತಿದೆ, ಅದಕ್ಕೆ ಚರ್ಚೆಗೆ ಅವಕಾಶ ಕೊಡಿ ಎಂದರೆ ನೀವು ಕೊಡುತ್ತಿಲ್ಲ. ನಿನ್ನೆ ಸಾಯಂಕಾಲದವರೆಗೆ ಕೊಟ್ಟಿಲ್ಲ. ಇವತ್ತು ಅಲ್ಲಿ ಗಲಭೆಗಳಾಗುತ್ತದೆ. ಅಂಥಾದ್ದಕ್ಕೆ ನೀವು ಅವಕಾಶ ಕೊಡುತ್ತಿಲ್ಲ. ಇದು ಅಂಥ ವೇದಿಕೆಯಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ರೈತರು ಆತ್ಮಹತ್ಯೆ ಮಾಡಿಕೊಂಡರೆ, ನಿಮ್ಮ ಸರ್ಕಾರಕ್ಕೆ ಪರಿಹಾರಧನ ಕೊಡಲಿಕ್ಕಾಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರಿಗೆ ಮಾದಲು ಪರಿಹಾರಧನ ಕೊಡಿ.

(ಗೊಂದಲ)

Mr. Speaker: Don't take down.

(ಗೊಂದಲ)

ಶ್ರೀ ಡಿ.ಎ. ಸದಾನಂದಗೌಡ : ಸುತ್ತೋಲೆ ಮೂಲಕ ಪೋಲೀಸ್ ಅಧಿಕಾರಿಗಳು ನಿಮ್ಮ ಹಣೆಬರಹವನ್ನು ಎಲ್ಲರಿಗೂ ತಿಳಿಸಿದ್ದಾರೆ.

(ಶ್ರೀ ಎನ್. ಸಂಪಂಗಿಯವರು ಸದನದ ಬಾವಿಗೆ ತೆರಳಿದರು)

1.00 ಪಿ.ಎಂ.

(ಗೊಂದಲ)

ಅಧ್ಯಕ್ಷರು : I am also independent ಎಂದು ಅವರು ಹೇಳುತ್ತಿರುವುದು. ಮಾನ್ಯ ಸಂಪಂಗಿಯವರೆ, ನಿನ್ನೆ ಮಾನ್ಯ ಪಿಡಬ್ಲ್ಯುಡಿ ಮಿನಿಸ್ಟರ್‌ರವರು ಉತ್ತರಿಸಿದ್ದಾರೆ. ನೀವು ರೈಜ್ ಮಾಡಿದ್ದಿರಿ. ನಾನು ನನ್ನ ಛೇಂಬರ್ಸ್‌ನಲ್ಲಿ ನೋಡುತ್ತಿದ್ದೆ. ಕೊಟ್ಟಿಲ್ಲವೆಂದು ಏಕೆ ಹೇಳುತ್ತೀರಿ?